# 24ರಿಂದ ಪರಿಕ್ರಮ ಫುಟ್‌ಬಾಲ್ ಲೀಗ್

## ಕಣದಲ್ಲಿ 16 ಶಾಲಾ ತಂಡಗಳು » 16ರ ವಯೋಮಿತಿ ಟೂರ್ನಿ » 6ನೇ ಆವೃತ್ತಿ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಪರಿಕ್ರಮ ಚಾಂಪಿಯನ್ಸ್ ಲೀಗ್ (ಪಿಸಿಎಲ್) 6ನೇ ಆವೃತ್ತಿಯ ಫುಟ್‌ಬಾಲ್ ಟೂರ್ನಿ ನ.24ರಿಂದ 26ರವರೆಗೆ ಬೆಂಗಳೂರು ಫುಟ್‌ಬಾಲ್ ಸ್ಟೇಡಿಯಂನಲ್ಲಿ ನಡೆಯಲಿದೆ. 16 ವಯೋಮಿತಿ ಬಾಲಕರ ವಿಭಾಗದಲ್ಲಿ ನಡೆಯುವ ಟೂರ್ನಿಯಲ್ಲಿ 16 ಶಾಲಾ ತಂಡಗಳು ಕಣಕ್ಕಿಳಿಯಲಿವೆ.

'ಶಾಲಾಮಟ್ಟದಲ್ಲೇ ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸಲು ಟೂರ್ನಿ ಶುರು ಮಾಡಲಾಯಿತು. ಈ ಬಾರಿ ಬೆಂಗಳೂರಿನ 13 ತಂಡಗಳು ಸೇರಿ ಅಂತಾರಾಜ್ಯದ 3 ತಂಡ ಸ್ಪರ್ಧಿಸಲಿದ್ದು, 3 ದಿನ ಟೂರ್ನಿ ನಡೆಯಲಿದೆ' ಎಂದು ಪರಿಕ್ರಮ ಸಿಇಒ ಶುಕ್ಲಾ ಬೋಸ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಖಿಲ ಭಾರತ ಫುಟ್‌ಬಾಲ್ ಒಕ್ಕೂಟ (ಎಐಎಫ್‌ಎಫ್), ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಮತ್ತು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ (ಬಿಡಿಎಫ್‌ಎ) ಸಹಕಾರದೊಂದಿಗೆ ಟೂರ್ನಿ ನಡೆಯಲಿದೆ. ಗೋವಾದ ಸೇಂಟ್ ಅನ್ಸ್ ಸ್ಕೂಲ್, ಸೇಂಟ್ ಲೊಯೋಲಾ ಹೈಸ್ಕೂಲ್ ಮತ್ತು ಕೇರಳದ ಫಾದರ್ ಹೈಯರ್ ಸೆಕೆಂಡರಿ ಸ್ಕೂಲ್ ಈ ಬಾರಿಯ ಹೊಸ ತಂಡಗಳು.



ಪಿಸಿಎಲ್ ಟೂರ್ನಿಯ ಟ್ರೋಫಿ ಅನಾವರಣಗೊಳಿಸಿದ ಪರಿಕ್ರಮ ಸಿಇಒ ಮತ್ತು ಸಿಬ್ಬಂದಿ ವರ್ಗ.

**ಟೂರ್ನಿಗೆ ಅಮೆರಿಕ ಅಂಪೈರ್ಸ್:** ಗುಣಮಟ್ಟತೆ ಕಾಪಾಡಿಕೊಳ್ಳಲು ಅಮೆರಿಕದ 5 ಅಂಪೈರ್‌ಗಳು ಕಾರ್ಯನಿರ್ವಹಿಸಲಿದ್ದಾರೆ. ವೃತ್ತಿಪರ ಫುಟ್‌ಬಾಲ್ ತರಬೇತುದಾರರಿಂದ ಅಂಡರ್ ಶಾಲೆ ಕೋಚ್‌ಗಳಿಗೆ ಐದು ದಿನ ತರಬೇತಿ ಕಾರ್ಯಾಗಾರ ಆಯೋಜಿಸಿದೆ.

**ಕಣದಲ್ಲಿರುವ ತಂಡಗಳು:** ಪರಿಕ್ರಮ ಹ್ಯುಮಾನಿಟಿ ಫೌಂಡೇಶನ್, ಡಿಪಿಎಸ್ ನಾರ್ಥ್, ಡಿಪಿಎಸ್ ಈಸ್ಟ್, ವಿದ್ಯಾಶಿಲ್ಪ ಅಕಾಡೆಮಿ, ವಿದ್ಯಾನಿಕೇತನ ಸ್ಕೂಲ್, ಸೇಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್, ಸೇಂಟ್ ಅಲೋಸಿಯಸ್ ಹೈಸ್ಕೂಲ್, ಸೊಣ್ಣೇನಹಳ್ಳಿ ಸರ್ಕಾರಿ ಶಾಲೆ, ಗ್ರೀನ್‌ವುಡ್ ಹೈಸ್ಕೂಲ್, ಇಂಡಸ್ ಇಂಟರ್ ನ್ಯಾಷನಲ್ ಸ್ಕೂಲ್, ಇನ್ವೆಂಚರ್ ಅಕಾಡೆಮಿ, ರ್ಯಾನ್ ಇಂಟರ್‌ನ್ಯಾಷನಲ್, ಶ್ರೀನ್ ಇಂಟರ್‌ನ್ಯಾಷನಲ್ ಸ್ಕೂಲ್, ಸೇಂಟ್ ಅನ್ಸ್ ಸ್ಕೂಲ್, ಸೇಂಟ್ ಲೊಯೋಲಾ ಹೈಸ್ಕೂಲ್, ಫಾದರ್ ಹೈಯರ್ ಸೆಕೆಂಡರಿ ಸ್ಕೂಲ್.